**ಕರ್ನಾಟಕ ಸರ್ಕಾರ**

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಬೆಂಗಳೂರು**

**ಸಂಖ್ಯೆ: ಇಡಿ/ಕೆಇಎ/ಆಡಳಿತ/2018** **ದಿನಾಂಕ: 05-12-2018**

ಸಿಇಟಿ-2018 – ಶುಶ್ರೂಷಾ (GNM) ಡಿಪ್ಲೊಮ / ಅರೆ ವೈದ್ಯಕೀಯ / ಬಿ.ಎಸ್.ಸಿ., ನರ್ಸಿಂಗ್ / ಬಿ.ಪಿ.ಟಿ.,/ ಬಿ.ಪಿ.ಒ ಕೋರ್ಸುಗಳ ಪ್ರವೇಶಕ್ಕಾಗಿ ಆಫ್‌ಲೈನ್ ಸೀಟು ಹಂಚಿಕೆ

ಮೊದಲನೇ ಹಾಗು ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದುಪಡಿಸಿಕೊಂಡಿರುವ / ಉಳಿದಿರುವ ಶುಶ್ರೂಷಾ (GNM) ಡಿಪ್ಲೊಮ / ಅರೆ ವೈದ್ಯಕೀಯ / ಬಿ.ಎಸ್.ಸಿ., ನರ್ಸಿಂಗ್ / ಬಿ.ಪಿ.ಟಿ.,/ ಬಿ.ಪಿ.ಒ *ಕೋರ್ಸುಗಳ ಸೀಟುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.* ಆಫ್‌ಲೈನ್ ಕೌನ್ಸಿಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಈ ಕೆಳಗೆ ನೀಡಿರುವ ವೇಳಾಪಟ್ಟಿಯಂತೆ ನಡೆಸಲಾಗುವುದು. ಅಭ್ಯರ್ಥಿಗಳು ಪ್ರಾಧಿಕಾರದಿಂದ ನೀಡಿರುವ ದಾಖಲಾತಿ ಪರಿಶೀಲನಾ ಚೀಟಿಯನ್ನು ತಪ್ಪದೆ ಹಾಜರು ಪಡಿಸಬೇಕು. ಹಾಗು ನಿಗದಿತ ಶುಲ್ಕ ರೂ.300/- ಅನ್ನು ಕಾರ್ಯನಿರ್ವಾಹಕ ನಿರ್ದೇಶಕರು, **ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರ ಹೆಸರಿನಲ್ಲಿ ಪಡೆದ ಡಿಮ್ಯಾಂಡ್ ಡ್ರಾಫ್ಟ್** ಅನ್ನು **(ಬೆಂಗಳೂರಿನಲ್ಲಿ ಸಂದಾಯವಾಗುವಂತೆ) ಹಾಜರು ಪಡಿಸಬೇಕು.**

*ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಅರ್ಹತೆ –*

1. **ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರಬೇಕು.**
2. *ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟುಗಳು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳು*
3. *ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆ ಆಗಿದ್ದು, ಈ ದಿನಾಂಕದೊಳಗೆ ಪ್ರಾಧಿಕಾರದಲ್ಲಿ ಸೀಟು ರದ್ದು ಪಡಿಸಿಕೊಂಡಿರುವವರು. (06-12-2018 ರೊಳಗಾಗಿ)*

*ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಈ ವಿಧದ ಕೆಳಗಿನ ಅಭ್ಯರ್ಥಿಗಳಿಗೆ ಅರ್ಹತೆ ಇರುವುದಿಲ್ಲ.*

1. *ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗಿದ್ದು ಕಾಲೇಜಿನಲ್ಲಿ ಪ್ರವೇಶ ಪಡೆದಿರುವವರು.*
2. *ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗಿ ಆಯಾ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿಫಲಾದವರು ಅಥವಾ ಹಂಚಿಕೆಯಾದ ಸೀಟನ್ನು ಪ್ರಾಧಿಕಾರದಲ್ಲಿ ರದ್ದುಪಡಿಸಿಕೊಳ್ಳದೇ ಇರುವ ಅಭ್ಯರ್ಥಿಗಳು.*

ಆಫ್‌ಲೈನ್ ಸೀಟು ಹಂಚಿಕೆಯ ವಿವರಗಳು

- ಈ ಸುತ್ತಿನಲ್ಲಿ ಆಯ್ಕೆ ಮಾಡಿಕೊಳ್ಳುವ ಸೀಟಿಗೆ ಸ್ಥಳದಲ್ಲಿಯೇ ಶುಲ್ಕವನ್ನು ಪಾವತಿಸಿ ದಿನಾಂಕ 15-12-2018 ರೊಳಗಾಗಿ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು ಮತ್ತು ಪ್ರವೇಶ ಪಡೆದ ನಂತರ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ದಾಖಲಿಸಬೇಕು.
- ಸರ್ಕಾರದ ನಿರ್ದೇಶನದಂತೆ, ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿದಿರುವ ಕೋರ್ಸುಗಳ ಪ್ರವೇಶಕ್ಕೆ ಸೀಟು ಹಂಚಿಕೆಯನ್ನು ನಡೆಸಲಾಗುವುದು.
- **ಆಫ್‌ಲೈನ್ ಸೀಟು ಹಂಚಿಕೆ (MOP-UP ROUND)** ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಸೀಟುಗಳ ಲಭ್ಯತೆಯನ್ನು ನೋಡಿ ಭಾಗವಹಿಸಬಹುದಾಗಿದೆ. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಯಾವುದಾದರು ಸೀಟುಗಳು ರದ್ದುಗೊಂಡರೆ ಅಂತಹ ರದ್ದುಗೊಳ್ಳುವ ಸೀಟುಗಳನ್ನು ಆಯಾ ಪ್ರವರ್ಗದಲ್ಲಿಯೇ ಹಂಚಿಕೆಗೆ ಪರಿಗಣಿಸಲಾಗುವುದು.
- ಈಗಾಗಲೇ ಪ್ರಕಟಿಸಿರುವ ವೇಳಾಪಟ್ಟಿಯಂತೆ ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದುಗೊಂಡಿರುವ / ಉಳಿದಿರುವ ಸೀಟುಗಳನ್ನು ಆಯಾ ವರ್ಗದ ಅಭ್ಯರ್ಥಿಗಳಿಗೆ ಮಾತ್ರ ಮೊದಲು ಹಂಚಿಕೆ ಮಾಡಲಾಗುವುದು. ನಂತರ ಸೀಟುಗಳು ಉಳಿದಲ್ಲಿ de-categorise ಮಾಡಿ ಹಂಚಿಕೆ ಮಾಡಲಾಗುವುದು.

ಆಫ್‌ಲೈನ್ ಸೀಟು ಹಂಚಿಕೆಯ ವೇಳಾಪಟ್ಟಿ – 2018

| ಕ್ರ. ಸಂ. | ಕೋರ್ಸುಗಳು | **ಎಲ್ಲಾ ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ** | **ಸಾಮಾನ್ಯ ವರ್ಗ ಮತ್ತು ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ** |
|---|---|---|---|
| 01 | ಶುಶ್ರೂಷಾ (GNM) ಡಿಪ್ಲೊಮ *ಕೋರ್ಸುಗಳಿಗೆ* | ದಿನಾಂಕ – 11-12-2018 ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.00 ರ ವರೆಗೆ | ದಿನಾಂಕ – 11-12-2018 ಮಧ್ಯಾಹ್ನ 1.30 ರಿಂದ |
| 02 | ಅರೆ ವೈದ್ಯಕೀಯ *ಕೋರ್ಸುಗಳಿಗೆ* | ದಿನಾಂಕ – 12-12-2018 ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.00 ರ ವರೆಗೆ | ದಿನಾಂಕ – 12-12-2018 ಮಧ್ಯಾಹ್ನ 1.30 ರಿಂದ |
| 03 | ಬಿ.ಎಸ್.ಸಿ., ನರ್ಸಿಂಗ್ / ಬಿ.ಪಿ.ಟಿ. / ಬಿ.ಪಿ.ಒ *ಕೋರ್ಸುಗಳಿಗೆ* | ದಿನಾಂಕ – 13-12-2018 ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.00 ರ ವರೆಗೆ | ದಿನಾಂಕ – 13-12-2018 ಮಧ್ಯಾಹ್ನ 1.30 ರಿಂದ |

ಕಾರ್ಯನಿರ್ವಾಹಕ ನಿರ್ದೇಶಕರ ಪರವಾಗಿ